# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\96\2015\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 11.1.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರ ಜಮೀನು ದೇವನಹಳ್ಳಿ ತಾಲೂಕ್ ಆಲೂರು ದುದ್ದನಹಳ್ಳಿ ಗ್ರಾಮದ ಸರ್ವೆ ನಂ.190(191) ಕ್ಷೇತ್ರ 1 ಎಕರೆ ಜಮೀನನ್ನು ಎದರುದಾರರು 20 ಗುಂಟೆ ಅಂತಾ ಮಾತ್ರ ಉಳಿಕೆ ಮಾಡಿದ್ದು, ಆದ್ದರಿಂದ ಇನ್ನುಳಿದ 20 ಗುಂಟೆ ಜಮೀನನ್ನು ದೂರುದಾರರ ಹೆಸರಿಗೆ ಖಾತೆ ಮಾಡಿ ಅವರ ಸ್ವಾಧೀನಕ್ಕೆ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವ ಕುರಿತು.

*******

ಶ್ರೀ. ಚಿಕ್ಕಬಚ್ಚಪ್ಪ ಬಿನ್ ಕೆಂಪಣ್ಣ, ಆಲೂರು ದುಡ್ಡನಹಳ್ಳಿ, ಕುಂದಾಲ ಹೋಬಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಕೇಶವಮೂರ್ತಿ, ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (2) ಶ್ರೀ.ಜಗದೀಶ, ಸರ್ವೆಯರ್, ತಾಲ್ಲೂಕು ಕಛೇರಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಆಲೂರು ದುದ್ದನಹಳ್ಳಿ ಗ್ರಾಮದ ಸ. ನಂ:190 (191) ಕ್ಷೇತ್ರ 1ಎ., ಜಮೀನು ಎಲ್.ಎಸ್.ಡಿ.ಆರ್. ಯೂಸಿ/ಎಸ್.ಆರ್.

40/95-96 ರಂತೆ ಚಿಕ್ಕಬಚ್ಚಪ್ಪ ತಂದೆ ಕೆಂಪಣ್ಣ ಇವರಿಗೆ ಮಂಜೂರಾಗಿರುತ್ತದೆ. ಆದರೆ ಎದುರುದಾರರು ಗ್ರಾಮದ ಜನರೊಂದಿಗೆ ಸೇರಿ ಜಮೀನು ಇರುವುದಿಲ್ಲ ಅಂತ ಹೇಳಿ ತಮ್ಮ ಸಹಿ ಪಡೆಯದೆ ಸ್ಮಶಾನ ಮತ್ತು ಆಶ್ರಯ ಯೋಜನೆಗೆ ಜಾಗೆಯ ಅವಶ್ಯಕತೆ ಇದೆ ಅಂತ 20 ಗು., ಜಮೀನನ್ನು ಕಡಿಮೆ ಮಾಡಿ ಕೇವಲ 20ಗು., ಜಮೀನನ್ನು ಮಾತ್ರ ಉಳಿಕೆ ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ತನ್ನ ಜಮೀನನ್ನು ಸರಿಯಾದ ಅಳತೆಯನ್ನು ನಮೂದಿಸಬೇಕೆಂದು ಆದೇಶಿಸಲು ದೂರು ಸಲ್ಲಿಸಿದ್ದಾರೆ.

3) ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ಆಲೂರು ದುದ್ದನಹಳ್ಳಿ ಗ್ರಾಮದ ಸ. ನಂ: 190ರಲ್ಲಿ ಬ್ಲಾಕ್ ನಂ: 1ರಲ್ಲಿ 1ಎ., ಜಮೀನು ಮಂಜೂರಾಗಿ ದಿ: 15.6.1996ರಂದು ಸಾಗುವಳಿ ಚೀಟಿ ನೀಡಲಾಗಿರುತ್ತದೆ. ಆದರೆ ದಿ: 18.2.2000 ರಂದು ಕಾರ್ಯನಿರ್ವಾಹಿಸುತ್ತಿದ್ದ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಇರುವ ಶ್ರೀ.ಶಿವಲಿಂಗೇಗೌಡ ದ್ವಿತಿಯ ದರ್ಜೆ ಭೂ ಮಾಪಕರು ನೋಟೀಸಿನಂತೆ ದೂರುದಾರರ ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಅವರು ನೀಡಿರುವ ಹೇಳಿಕೆಯಂತೆ ಅನುಭವದಲ್ಲಿರುವ ಆಧಾರದಂತೆ 20ಗು., ಅಳತೆ ಕೆಲಸವನ್ನು ಕೈಗೊಂಡಿರುತ್ತಾರೆ. ಅನುಭವದ ಪ್ರಕಾರ ದೂರುದಾರರು ಕೇವಲ 20ಗು., ಜಮೀನಿನಲ್ಲಿ ಮಾತ್ರ ಅನುಭವದಲ್ಲಿರುತ್ತಾರೆಂದು ಗ್ರಾಮಸ್ಥರು ಹೇಳಿಕೆ ನೀಡಿರುತ್ತಾರೆ. ಆದ್ದರಿಂದ ಇದನ್ನೇ ಪಹಣಿ ಪತ್ರಿಕೆಯಲ್ಲಿ ಇಂಡೀಕರಣ ಮಾಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4) ದೂರುದಾರರು ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5) ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) " ದೂರುದಾರರಿಗೆ ಎಲ್.ಎನ್.ಡಿ.ಆರ್. ಯೂಸಿ/ಎಸ್.ಆರ್. 40/95-96 ರಂತೆ ಸ. ನಂ: 190ರಲ್ಲಿ 1ಎ., ಜಮೀನು ಮಂಜೂರಾಗಿರುತ್ತದೆ ಎನ್ನುವುದನ್ನು ಎದುರುದಾರ ನಂ:1 ರವರು ಒಪ್ಪಿಕೊಂಡಿರುತ್ತಾರೆ. ಆದರೆ ಆ ನಂತರ ನಡೆದ ಹಕ್ಕು ದುರಸ್ಥಿ ವೇಳೆಯಲ್ಲಿ ಗ್ರಾಮಸ್ಥರ ಹೇಳಿಕೆ ಮೇರೆಗೆ ಅನುಭವದ ಆಧಾರದಮೇಲೆ 20ಗು., ಜಮೀನನ್ನು ಮಾತ್ರ ಇಂಡೀಕರಣ ಮಾಡಲಾಗಿರುತ್ತದೆ ಎಂದು ಎದುರುದಾರರು ತಿಳಿಸಿರುತ್ತಾರೆ.

ಆ)ದೂರುದಾರರಿಗೆ 1ಎ., ಜಮೀನು ನೀಡಿದ ಬಗ್ಗೆ ನಮೂನೆ ನಂ: 7 ಲಭ್ಯವಿರುತ್ತದೆ. ಆ ಕಾರಣ ಒಮ್ಮೆ ಮಂಜೂರಿಯಾದ ಕ್ಷೇತ್ರವನ್ನು ಪುನಃ ಅನುಭವದ ಆಧಾರದ ಮೇಲೆ ಕಡಿಮೆ ಮಾಡುವ ಪ್ರಶ್ನೆ ಉದ್ಭವಿಸದು. ಪ್ರಸ್ತುತ ದೂರುದಾರರ ಹೆಸರಿನಲ್ಲಿ ಕೇವಲ 20ಗು., ಜಮೀನು ಮಾತ್ರ ಪಹಣಿಯಲ್ಲಿ ನಮೂದಾಗಿರುತ್ತದೆ. ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಸಹ ಅವರು ದೂರುದಾರರಿಗೆ ಪರಿಹಾರ ನೀಡಲು ವಿಫಲರಾಗಿರುತ್ತದೆ. ಆದ್ದರಿಂದ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

6) ಈ ಪ್ರಕರಣದಲ್ಲಿ ಎದರುದಾರರ ವಿರುದ್ಧ ಕ್ರಮ ಜರುಗಿಸಿದರಷ್ಟೇ ಸಾಲದು, ಸರ್ವೆ ನಂ.190 ರಲ್ಲಿ ದೂರುದಾರರಿಗೆ ಕೇವಲ 20 ಗುಂಟೆ ಜಮೀನನ್ನು ಮಾತ್ರ ಉಳಿಕೆ ಮಾಡಿದ್ದು, ಇನ್ನುಳಿದ 20 ಗುಂಟೆ ಜಮೀನನ್ನು ದೂರುದಾರರ ಹೆಸರಿಗೆ ಖಾತೆ ಮಾಡಿ ಅವರ ಸ್ವಾಧೀನಕ್ಕೆ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸುವುದು ಅಗತ್ಯವಾಗಿರುತ್ತದೆ. ಹಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

7) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಮಾನ್ಯ ಉಪಲೋಕಾಯುಕ್ತ-2 ರವರಿಗೆ ತಿಳಿಸಲು ಹೇಳಿದೆ.

11-1-12.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.